# ಮೈಸೂರು ವಿಶ್ವವಿದ್ಯಾನಿಲಯ

ದಿನಾಂಕ 29-07-2021ರ ಗುರುವಾರದಂದು ಪೂರ್ವಾಹ್ನ 11.30 ಗಂಟೆಗೆ ಮೈಸೂರು ವಿಶ್ವವಿದ್ಯಾನಿಲಯದ ವಿಜ್ಞಾನ ಭವನ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ನಡೆದ ಆರನೇ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿ.

<u>ಹಾಜರಿದ್ದ ಸದಸ್ಯರುಗಳು:</u>

| | | |
|---|---|---|
| 1. | ಪ್ರೊ. ಜಿ.ಹೇಮಂತಕುಮಾರ್ | ಕುಲಪತಿಗಳು ಹಾಗೂ ಅಧ್ಯಕ್ಷರು |
| 2. | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಇವರ ಪರವಾಗಿ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು. | ಸದಸ್ಯರು |
| 3. | ಪ್ರೊ. ಜಿ.ವೆಂಕಟೇಶ್ ಕುಮಾರ್ | ಸದಸ್ಯರು |
| 4. | ಶ್ರೀ ಎಂ.ಬಿ. ಗಪ್ಪಣ್ಣ | ಸದಸ್ಯರು |
| 5. | ಡಾ. ವೆಂಕಟೇಶಯ್ಯ | ಸದಸ್ಯರು |
| 6. | ಡಾ. ನಾಗರಾಜು | ಸದಸ್ಯರು |
| 7. | ಡಾ. ಬಿ.ರಾಜಣ್ಣ | ಸದಸ್ಯರು |
| 8. | ಡಾ. ಜೆ ಎನ್ ವೆಂಕಟೇಶ್ | ಸದಸ್ಯರು |
| 9. | ಶ್ರೀ. ಆರ್. ಪ್ರದೀಪ್‌ಕುಮಾರ್ ದೀಕ್ಷಿತ್ | ಸದಸ್ಯರು |
| 10. | ಶ್ರೀ ಎಸ್.ಡಿ. ದೊಡ್ಡಚಾರಿ | ಸದಸ್ಯರು |
| 11. | ಶ್ರೀಮತಿ ವೈ.ಕೆ. ಪವಿತ್ರ | ಸದಸ್ಯರು |
| 12. | ಡಾ. ಈ.ಸಿ.ನಿಂಗರಾಜ್‌ಗೌಡ | ಸದಸ್ಯರು |
| 13. | ಡಾ. ಎಂ.ಎಸ್.ದಾಮೋದರ | ಸದಸ್ಯರು |
| 14. | ಪ್ರೊ. ಎ.ಪಿ.ಜ್ಞಾನ ಪ್ರಕಾಶ್, ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 15. | ಡಾ.ಸಂಗೀತ ಗಜಾನನ ಭಟ್, ಹಣಕಾಸು ಅಧಿಕಾರಿಗಳು | ಸದಸ್ಯರು |
| 16. | ಪ್ರೊ. ಆರ್.ಶಿವಪ್ಪ | ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿ |

<u>ಹಾಜರಾಗದ ಸದಸ್ಯರು:</u>

1. ಡಾ. ಚೈತ್ರ ನಾರಾಯಣ
2. ಡಾ. ಸೈಯದ್ ಕಾಜ್ಞಾ. ಮೊಹಿದ್ದಿನ್
3. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
5. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
6. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಸಭೆಗೆ ಹಾಜರಿದ್ದ ಸದಸ್ಯರುಗಳನ್ನು ಹೃತ್ಪೂರ್ವಕವಾಗಿ ಸಭೆಗೆ ಸ್ವಾಗತಿಸಿದರು.

ಮೊದಲಿಗೆ ಸರ್ಕಾರದಿಂದ ನಿಯೋಜನೆಗೊಂಡು ಹಣಕಾಸು ಅಧಿಕಾರಿಗಳಾಗಿ ಅಧಿಕಾರವಹಿಸಿಕೊಂಡು ಪ್ರಪ್ರಥಮವಾಗಿ ಸಭೆಗೆ ಆಗಮಿಸಿರುವ ಡಾ. ಸಂಗೀತಾ ಗಜಾನನ ಭಟ್ ಅವರನ್ನು

ಹೊಸದಾಗಿ ಸಿಂಡಿಕೇಟ್ ಸದಸ್ಯರಾಗಿ ನಾಮನಿರ್ದೇಶನಗೊಂಡಿರುವ ಡಾ. ವೆಂಕಟೇಶಯ್ಯ, ಪ್ರಾಂಶುಪಾಲರು ಶ್ರೀ ಡಿ. ದೇವರಾಜ ಅರಸು ಪ್ರಥಮ ದರ್ಜೆ ಕಾಲೇಜು, ಹುಣಸೂರು ಹಾಗೂ ಡಾ. ನಾಗರಾಜು, ಪ್ರಾಂಶುಪಾಲರು, ಬಿ.ಜಿ.ಎಸ್. ಬಿ.ಇಡಿ. ಕಾಲೇಜು, ಕುವೆಂಪುನಗರ, ಮೈಸೂರು ಇವರನ್ನು ಸಹ ಸಿಂಡಿಕೇಟ್ ಸಭೆಗೆ ಪರಿಚಯಿಸಿ ಸಭೆಗೆ ಸ್ವಾಗತಿಸಿದರು.

ನಂತರ, ಇದುವರೆಗೂ ಮೈಸೂರು ವಿಶ್ವವಿದ್ಯಾನಿಲಯದ ಹಣಕಾಸು ಅಧಿಕಾರಿಗಳಾಗಿ ಮತ್ತು ಸಿಂಡಿಕೇಟ್ ಸದಸ್ಯರಾಗಿ ಸೇವೆಸಲ್ಲಿಸಿದ ಪ್ರೊ. ಟಿ.ಎಸ್ ದೇವರಾಜ ಇವರ ಸೇವೆಯನ್ನು ಸ್ಮರಿಸಿ ಕಡತದಲ್ಲಿ ದಾಖಲಿಸಲಾಯಿತು.

ಅದೇ ರೀತಿ ಶ್ರೀ ಕುಮಾರ, ಸುಜಲ ಕಾಲೇಜ್ ಆಫ್ ಕಾಮರ್ಸ್, ಹಾಸನ ಮತ್ತು ಶ್ರೀಮತಿ ಕೆ.ನಾಗರತ್ನಮ್ಮ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಟಿ.ನರಸೀಪುರ ಇವರು ಸಿಂಡಿಕೇಟ್ ಸದಸ್ಯರಾಗಿ ಕಾರ್ಯನಿರ್ವಹಿಸಿದ ಸೇವೆಯನ್ನು ಸ್ಮರಿಸಿ ಕಡತದಲ್ಲಿ ದಾಖಲಿಸಲಾಯಿತು.

ಇತ್ತೀಚೆಗೆ ನಿಧನರಾದ ಕನ್ನಡ ಚಿತ್ರರಂಗದ ಹಿರಿಯ ಕಲಾವಿದೆ ಮತ್ತು ಖ್ಯಾತ ನಟಿ ಡಾ. ಜಯಂತಿ ಇವರ ಚಿತ್ರರಂಗದಲ್ಲಿ ಸಲ್ಲಿಸಿದ್ದ ಕಲಾಸೇವೆಯನ್ನು ಸ್ಮರಿಸಿ ಶ್ರದ್ಧಾಂಜಲಿ ಅರ್ಪಿಸಲಾಯಿತು.

ತದನಂತರ, ಮಾನ್ಯ ಕುಲಪತಿಗಳು ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರುಗಳನ್ನು ಸ್ವಾಗತಿಸಿ, ಕಾರ್ಯಸೂಚಿಯಲ್ಲಿನ ವಿಷಯಗಳನ್ನು ಸಭೆಯಲ್ಲಿ ಮಂಡಿಸಿದರು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| I | ದಿನಾಂಕ : 30-06-2021ರಂದು ಜರುಗಿದ "ಐದನೇ ಸಾಮಾನ್ಯ ಸಿಂಡಿಕೇಟಿನ ಸಭೆ"ಯ ನಡವಳಿಯನ್ನು ಬಗ್ಗೆ. |
| ತೀರ್ಮಾನ | ದಿನಾಂಕ: 30-06-2021ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ವಿಷಯ ಸಂಖ್ಯೆ 6.8ರಲ್ಲಿ UGC-HRDCಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ New Pension Scheme ಅಳವಡಿಸುವ ಕುರಿತು ಚರ್ಚಿಸಿ ತೀರ್ಮಾನಿಸಲಾಗಿತ್ತು. ಇದರಲ್ಲಿ ಈ ಕೆಳಕಂಡಂತೆ ಕೆಲವು ಮಾರ್ಪಾಡುಗಳನ್ನು ಮಾಡುವುದರೊಂದಿಗೆ ದೃಢೀಕರಿಸಲಾಯಿತು. |

| ಕಳೆದ ಸಭೆಯ ತೀರ್ಮಾನ | ತಿದ್ದುಪಡಿ |
|---|---|
| ಮೈಸೂರು ವಿಶ್ವವಿದ್ಯಾನಿಲಯದ ಯುಜಿಸಿ-ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಕೆಳಕಂಡ ಬೋಧಕೇತರ ಸಿಬ್ಬಂದಿ ವರ್ಗದವರಿಗೆ ಕುಲಸಚಿವರ ಪತ್ರ ಸಂಖ್ಯೆ ಡಿವಿ1/42/ಎಸಿ/ಎಎಸ್‌ಸಿ/2004-05, ದಿನಾಂಕ: 29-07-2013ರ ಪ್ರಕಾರ ಈಗಾಗಲೇ ವೇತನ, ವೇತನ ಶ್ರೇಣಿ ಮತ್ತು ಎಲ್ಲಾ ಸೇವಾ ಸೌಲಭ್ಯಗಳನ್ನು ನೀಡುತ್ತಿದ್ದು, ಅದರಂತೆಯೇ ಸದರಿ ದಿನಾಂಕದಿಂದಲೇ ಪೂರ್ವಾನ್ವಯವಾಗುವಂತೆ ವಿಶ್ವವಿದ್ಯಾನಿಲಯದ ವತಿಯಿಂದ New Defined Contribution Pension Scheme (New Pension Scheme) ಸೌಲಭ್ಯವನ್ನು ಪಡೆಯುತ್ತಿರುವ ಉದ್ಯೋಗಿ | ಮೈಸೂರು ವಿಶ್ವವಿದ್ಯಾನಿಲಯದ ಯುಜಿಸಿ-ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಕೆಳಕಂಡ ಬೋಧಕೇತರ ಸಿಬ್ಬಂದಿ ವರ್ಗದವರಿಗೆ ಕುಲಸಚಿವರ ಪತ್ರ ಸಂಖ್ಯೆ: ಡಿವಿ1/42/ಎಸಿ/ಎಎಸ್‌ಸಿ/2004-05, ದಿನಾಂಕ: 29-07-2013ರ ಪ್ರಕಾರ ಈಗಾಗಲೇ ವೇತನ, ವೇತನಶ್ರೇಣಿ ಮತ್ತು ಎಲ್ಲಾ ಸೇವಾ ಸೌಲಭ್ಯಗಳನ್ನು ನೀಡುತ್ತಿದ್ದು ಅದರಂತೆಯೇ ಸದರಿ ದಿನಾಂಕದಿಂದಲೇ ಪೂರ್ವಾನ್ವಯವಾಗುವಂತೆ ವಿಶ್ವವಿದ್ಯಾನಿಲಯದ ವತಿಯಿಂದ New Defined Contribution Pension Scheme (New Pension Scheme) ಸೌಲಭ್ಯವನ್ನು ವಿಶ್ವವಿದ್ಯಾನಿಲಯದ ಇತರೆ New Pension Scheme ಸೌಲಭ್ಯವನ್ನು ಪಡೆಯುತ್ತಿರುವ ಉದ್ಯೋಗಿಗಳಂತೆಯೇ ಕಾರ್ಯಗತಗೊಳಿಸಲು ಸಿಂಡಿಕೇಟ್ ಸಭೆಯು ನಿರ್ಣಯಿಸಿತು. |

ಗಳಂತೆಯೇ ಕಾರ್ಯಗತಗೊಳಸಲು ಸಂಬಂಧಪಟ್ಟ ಪ್ರಾಯೋಜಿತ ಸಂಸ್ಥೆಗೆ ಪತ್ರ ಬರೆದು ಪ್ರಾಯೋಜಿತ ಸಂಸ್ಥೆಯಿಂದ ಅನುಮತಿ ದೊರೆತ ನಂತರ ಸದರಿ ಉದ್ಯೋಗಿಗಳಗೆ New Pension Scheme ಅನುಷ್ಠಾನಗೊಳಸಲು ಸಿಂಡಿಕೇಟ್ ಸಭೆಯು ನಿರ್ಣಯಿಸಿತು.

| ಕ್ರ.ಸಂ | ಹೆಸರು | ಹುದ್ದೆ | ವೇತನ ಶ್ರೇಣಿ ನಿಗಧಿಪಡಿಸಿದ ದಿನಾಂಕ |
|---|---|---|---|
| 1. | ಶ್ರೀ ಲಾಲನ್ ಶೇಖ್ | ಕಂಪ್ಯೂಟರ್ ಆಪರೇಟರ್ | 29-07-2013 |
| 2 | ಶ್ರೀ ಶಿವರಾಜು .ಪಿ | ಕಿರಿಯ ಸಹಾಯಕರು | 29-07-2013 |
| 3 | ಶ್ರೀ ಅರುಣ್ ಕುಮಾರ್ ಆರ್ | ಸೇವಕ | 29-07-2013 |

ಮುಂದುವರೆದು, ಹಿಂದಿನ ಅವಧಿಯಲ್ಲಿನ ಸದರಿ ಸಿಬ್ಬಂದಿಗಳ ಪ್ರತಿ ಮಾಹೆಯ ಮಾಸಿಕ ವೇತನ New Pension Scheme ವಂತಿಕೆಯ ಶೇ.10ರಷ್ಟು ಮೊತ್ತವನ್ನು ಸಿಬ್ಬಂದಿಗಳೇ ಖುದ್ದು ಭರಿಸತಕ್ಕದ್ದು ಹಾಗೂ ಸಮನಾಂತರ ವಂತಿಕೆಯ ಮೊತ್ತವನ್ನು ಯುಜಿಸಿಯಿಂದ ಅನುದಾನ ಬಿಡುಗಡೆಯಾದ ನಂತರ ಭರಿಸುವುದು. ಈ ಸಂಬಂಧ ಯುಜಿಸಿಗೆ ಪತ್ರ ಬರೆದು ಅನುದಾನ ಬಿಡುಗಡೆ ಮಾಡಲು ಕ್ರಮಕೈಗೊಳ್ಳುವುದು.

2021-22ನೇ ಹಣಕಾಸಿನ ಸಾಲಿನಿಂದ ಅಂದರೆ ದಿನಾಂಕ: 01-08-2021ರಿಂದ ಜಾರಿಗೆ ಬಂದಂತೆ ಸಿಬ್ಬಂದಿಯ New Pension Scheme ವಂತಿಕೆಯನ್ನು ಸಿಬ್ಬಂದಿಗಳ ವೇತನದಿಂದ ಕಟಾಯಿಸಲು ಮತ್ತು ಸಮನಾಂತರ ವಂತಿಕೆಯ ಮೊತ್ತವನ್ನು ಯುಜಿಸಿಯ ಅನುದಾನದ 'ವೇತನ'ದ ಶೀರ್ಷಿಕೆಯಡಿಯಲ್ಲಿ ಭರಿಸಲು ಸಹ ಸಿಂಡಿಕೇಟ್ ಸಭೆ ನಿರ್ಣಯಿಸಿತು.

ಈಗಾಗಲೇ ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳ New Pension Scheme ವಂತಿಕೆಯನ್ನು NSDL ಅಡಿಯಲ್ಲಿ ತೊಡಗಿಸುತ್ತಿದ್ದು ಇದೇ ರೀತಿ ಸದರಿ ಸಿಬ್ಬಂದಿಗಳ New Pension Scheme ವಂತಿಕೆಯನ್ನು ಸಹ ಜಮಾ ಮಾಡಬೇಕೆಂದು ತೀರ್ಮಾನಿಸಲಾಯಿತು.

**ಸಾಮಾನ್ಯ ಸಭೆ 2021/7.1** — ಬಯೋಟೆಕ್ನಾಲಜಿ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ.

ಪ್ರೊ. ಎಸ್.ಆರ್.ನಿರಂಜನ್, ಅಧ್ಯಕ್ಷರು ಹಾಗೂ ಪ್ರಾಧ್ಯಾಪಕರು ಇವರ ಬಯೋಟೆಕ್ನಾಲಜಿ ವಿಭಾಗದ ಅಧ್ಯಕ್ಷರ ಅವಧಿಯು ದಿನಾಂಕ: 09-07-2021ಕ್ಕೆ ಮುಕ್ತಾಯಗೊಂಡಿದ್ದು, ಅದೇ ವಿಭಾಗದ ಜ್ಯೇಷ್ಠತಾ ಪಟ್ಟಿಯಲ್ಲಿ ಹಿರಿಯರಾಗಿರುವ ಡಾ. ಹೆಚ್.ಎಸ್. ಅಪರ್ಣಾರವರನ್ನು ನಿಯಮಾಗಳನುಸಾರ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ ಎಂದು ಕುಲಪತಿಗಳು ಸಭೆಗೆ ಮಾಹಿತಿ ನೀಡಿ ಸದರಿ ವಿಷಯವನ್ನು ಅನುಸಮರ್ಥಿಸಲು ತಿಳಸಿದರು.

**ತೀರ್ಮಾನ** — ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7)ರ ಪ್ರಕಾರ ಬಯೋಟೆಕ್ನಾಲಜಿ ವಿಭಾಗದ ಜ್ಯೇಷ್ಠತಾ ಪಟ್ಟಿಯಲ್ಲಿ ಹಿರಿಯರಾಗಿರುವ ಡಾ. ಹೆಚ್.ಎಸ್. ಅಪರ್ಣಾರವರನ್ನು ಅಧ್ಯಕ್ಷರನ್ನಾಗಿ ದಿನಾಂಕ: 19-07-2021ರಿಂದ ಜಾರಿಗೆ ಬಂದಂತೆ 02 ವರ್ಷಗಳ ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ಅಥವಾ ಮುಂದಿನ ಆದೇಶದವರೆಗೆ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.

**ಸಾಮಾನ್ಯ ಸಭೆ 2021/7.2** — ವ್ಯವಹಾರ ಆಡಳಿತ ಅಧ್ಯಯನ ವಿಭಾಗದ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7)ರ ಪ್ರಕಾರ ಡಾ.ಅಯಿಷಾ ಎಂ ಷರೀಫ್, ಅಧ್ಯಕ್ಷರು ಹಾಗೂ ಪ್ರಾಧ್ಯಾಪಕರು ಇವರ ವಿಭಾಗದ ಅಧ್ಯಕ್ಷರ

| | |
|---|---|
| | ಅವಧಿಯು ದಿನಾಂಕ: 04-08-2021ಕ್ಕೆ ಮುಕ್ತಾಯಗೊಳ್ಳಲಿದ್ದು, ಅದೇ ವಿಭಾಗದ ಜ್ಯೇಷ್ಠತಾ ಪಟ್ಟಿಯಲ್ಲಿ ಹಿರಿಯರಾಗಿರುವ ಡಾ. ಡಿ. ಆನಂದ, ಪ್ರಾಧ್ಯಾಪಕರು ಇವರಿಗೆ ಅಧ್ಯಕ್ಷರನ್ನು ನೇಮಕ ಮಾಡುವ ಸಂಬಂಧ ವಿಷಯವನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಮತ್ತು ತೀರ್ಮಾನಕ್ಕೆ ಮಂಡಿಸಲಾಗಿದೆ ಎಂದು ಕುಲಪತಿಗಳು ತಿಳಿಸಿದರು. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7)ರ ಪ್ರಕಾರ ವ್ಯವಹಾರ ಆಡಳಿತ ಅಧ್ಯಯನ ವಿಭಾಗದ ಜ್ಯೇಷ್ಠತಾ ಪಟ್ಟಿಯಲ್ಲಿ ಹಿರಿಯರಾಗಿರುವ ಡಾ. ಡಿ.ಆನಂದ, ಪ್ರಾಧ್ಯಾಪಕರು ಇವರನ್ನು ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ದಿನಾಂಕ: 05-08-2021ರಿಂದ ಜಾರಿಗೆ ಬಂದಂತೆ 02 ವರ್ಷಗಳ ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ಅಥವಾ ಮುಂದಿನ ಆದೇಶದವರೆಗೆ ನೇಮಕ ಮಾಡಲು ಸಿಂಡಿಕೇಟ್ ಸಭೆಯು ಅನುಮತಿ ನೀಡಿತು. |
| ಸಾಮಾನ್ಯ ಸಭೆ 2021/7.3 | ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರದ ನಿರ್ದೇಶಕರನ್ನು ನೇಮಕ ಮಾಡುವ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 34(7)ರ ಪ್ರಕಾರ ಪ್ರೊ. ಜೆ.ಸೋಮಶೇಕರ್, ಪ್ರಾಧ್ಯಾಪಕರು, ಡಾ. ಬಿ.ಆರ್.ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣಾ ಕೇಂದ್ರ, ಮಾನಸಗಂಗೋತ್ರಿ, ಮೈಸೂರು ಇವರ ಕೇಂದ್ರದ ನಿರ್ದೇಶಕರ ಅವಧಿಯು ದಿನಾಂಕ 10.09.2021ಕ್ಕೆ ಮುಕ್ತಾಯಗೊಳ್ಳುವುದರಿಂದ ಕೇಂದ್ರದಲ್ಲಿ ಸಹ ಪ್ರಾಧ್ಯಾಪಕರಾಗಿರುವ ಡಾ. ನರೇಂದ್ರ ಕುಮಾರ್, ಸಹ ಪ್ರಾಧ್ಯಾಪಕರು ಇವರನ್ನು ದಿನಾಂಕ 13-09-2021ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಸದರಿ ಕೇಂದ್ರದ ನಿರ್ದೇಶಕರನ್ನಾಗಿ ನೇಮಕ ಮಾಡಲು ಸಿಂಡಿಕೇಟ್ ಸಭೆಯು ನಿರ್ಣಯಿಸಿತು. |
| ಸಾಮಾನ್ಯ ಸಭೆ 2021/7.4 | ದಿವಂಗತ ಶ್ರೀ ಕುಮಾರಸ್ವಾಮಿ ಎನ್.ಎಸ್., ದ್ವಿತೀಯ ದರ್ಜೆ ಗುಮಾಸ್ತರು, ಎಸ್.ಸಿ./ ಎಸ್.ಟಿ. ವಿಶೇಷ ಘಟಕ, ಶತಮಾನೋತ್ಸವ ಭವನ, ಮೈಸೂರು ಇವರ ಮಗಳಾದ ಕು. ದೇವಿಕ ಎಂ.ಕೆ. ನಾಯಕ ಅವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ. |
| ತೀರ್ಮಾನ | ವಿಶ್ವವಿದ್ಯಾನಿಲಯದ ಸೇವೆಯಲ್ಲಿರುವಾಗಲೇ ನಿಧನರಾದ ನೌಕರರ ಕುಟುಂಬದವರಿಗೆ ಅನುಕಂಪ ಆಧಾರದ ಮೇಲೆ ಉದ್ಯೋಗ ನೀಡಲು ರಚಿಸಲಾಗಿರುವ ಅಧಿನಿಯಮಗಳ ಅನ್ವಯ ದಿವಂಗತ ಶ್ರೀ ಕುಮಾರಸ್ವಾಮಿ.ಎನ್.ಎಸ್., ದ್ವಿತೀಯ ದರ್ಜೆ ಗುಮಾಸ್ತರು, ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ವಿಶೇಷ ಘಟಕ, ಶತಮಾನೋತ್ಸವ ಭವನ, ಮೈಸೂರು ಇವರ ಮಗಳಾದ ಕು.ದೇವಿಕ ಎಂ.ಕೆ ಇವರು ಉದ್ಯೋಗ ಕೋರಿ ನಿಗದಿತ ನಮೂನೆಯಲ್ಲಿ ಸಲ್ಲಿಸಿರುವ ಅರ್ಜಿ ಹಾಗೂ ಅರ್ಜಿಯಲ್ಲಿ ಲಗತ್ತಿಸಿರುವ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿದ ಸಭೆಯು ಕು.ದೇವಿಕ.ಎಂ.ಕೆ ಇವರನ್ನು ಅನುಕಂಪದ ಆಧಾರದ ಮೇಲೆ ದ್ವಿತೀಯ ದರ್ಜೆ ಗುಮಾಸ್ತರ ಹುದ್ದೆಯಲ್ಲಿ ನೇಮಕಾತಿ ಮಾಡಲು ಅನುಮೋದಿಸಿತು. |
| ಸಾಮಾನ್ಯ ಸಭೆ 2021/7.5 | SJB College of Management Studies Research Centre, # 67, BGS Health & Education City, ಕೆಂಗೇರಿ, ಬೆಂಗಳೂರು ಇವರು ಈಗಾಗಲೇ ವಿಶ್ವವಿದ್ಯಾನಿಲಯ-ದಿಂದ ಮಾನ್ಯತೆ ಪಡೆದು Commerce & Management ವಿಷಯಗಳಲ್ಲಿ ನಡೆಸುತ್ತಿರುವ ಸಂಶೋಧನಾ ಕಾರ್ಯದ ಜೊತೆಗೆ ಹೆಚ್ಚುವರಿಯಾಗಿ Kannada ವಿಷಯಕ್ಕೆ ಸಂಶೋಧನಾ ಮಾನ್ಯತೆ ಕೋರಿದ್ದ ಸಂಬಂಧ ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| | ಮಾನ್ಯ ಸದಸ್ಯರಾದ ಪ್ರೊ. ಜಿ.ವೆಂಕಟೇಶ್ ಕುಮಾರ್‌ರವರು ಮಾತನಾಡಿ ಸದರಿ ಕೇಂದ್ರಕ್ಕೆ ಮಾನ್ಯತೆ ನೀಡುವ ಸಂಬಂಧ, ವಿಶ್ವವಿದ್ಯಾನಿಲಯ ಪರಿವೀಕ್ಷಣಾ ಸಮಿತಿಯು ಭೇಟಿ ನೀಡಿರುವ ಬಗ್ಗೆ ಸಮಿತಿಯ ಸದಸ್ಯರುಗಳ ವಿವರಗಳನ್ನು ವಿಷಯಸೂಚಿಯ ಜೊತೆ ಲಗತ್ತಿಸಿ ಸಭೆಗೆ ಮಂಡಿಸಬೇಕಾಗಿತ್ತೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. |

| | |
|---|---|
| | ನಂತರ ಮಾನ್ಯ ಕುಲಪತಿಯವರು ಪ್ರೊ. ಜಿ.ವೆಂಕಟೇಶ್ ಕುಮಾರ್‌ರವರ ಅಭಿಪ್ರಾಯವನ್ನು ಅನುಮೋದಿಸಿದರು. |
| ತೀರ್ಮಾನ | SJB College of Management Studies Research Centre, #67, BGS Health & Education City, ಕೆಂಗೇರಿ, ಬೆಂಗಳೂರು ಈ ಸಂಸ್ಥೆಗೆ ಕನ್ನಡ ವಿಷಯದಲ್ಲಿ ಸಂಶೋಧನಾ ಕಾರ್ಯ ಕೈಗೊಳ್ಳಲು ಮಾನ್ಯತೆ ನೀಡುವ ಬಗೆಗಿನ ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ ಪರೀವಿಕ್ಷಣಾ ಸಮಿತಿಯ ಶಿಫಾರಸ್ಸನ್ನು ಅನುಮೋದಿಸಿತು. |
| ಸಾಮಾನ್ಯ ಸಭೆ 2021/7.6 | Axiom Institute of Education, (Youth Efforts For Society Trust (YES)), # 87, 4ನೇ ಕ್ರಾಸ್, ಯಾದವಗಿರಿ, ಮೈಸೂರು ಇವರ ಸಂಸ್ಥೆಯಲ್ಲಿ Specialized Programme ಅಡಿಯಲ್ಲಿ 03 ಡಿಪ್ಲೋಮ ಕೋರ್ಸ್‌ಗಳನ್ನು ಪ್ರಾರಂಭಿಸಲು ಮಾನ್ಯತೆ ಕೋರಿದ್ದ ಸಂಬಂಧ ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| | Axiom Institute of Education, (Youth Efforts For Society G Trust (YES)), #87, 4ನೇ ಕ್ರಾಸ್, ಯಾದವಗಿರಿ, ಮೈಸೂರು ಈ ಸಂಸ್ಥೆಗೆ Specialized Programme ಅಡಿಯಲ್ಲಿ ಹೊಸದಾಗಿ 1. Diploma in Fire & Personal Safety 2. Diploma in Hospital & Healthcare Management 3. Diploma in Business Administration ಕೋರ್ಸ್‌ಗಳನ್ನು ಪ್ರತಿ ಕೋರ್ಸಿಗೆ 40ರಂತೆ ವಿದ್ಯಾರ್ಥಿಗಳ ಪ್ರವೇಶಾತಿ ಮಿತಿಯೊಂದಿಗೆ 2021-22ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಲು ಮಾನ್ಯತೆ ನೀಡುವ ಬಗೆಗಿನ ಪ್ರಸ್ತಾವನೆಯ ಸಂಬಂಧ ಪರೀವಿಕ್ಷಣಾ ಸಮಿತಿಯ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿತು.<br><br>1. ಮಾನ್ಯ ಸದಸ್ಯರಾದ ಪ್ರೊ. ಜಿ.ವೆಂಕಟೇಶ್ ಕುಮಾರ್‌ರವರು ಮಾತನಾಡಿ, ಪರೀವಿಕ್ಷಣಾ ಸಮಿತಿಯು ಆನ್‌ಲೈನ್ ಮೂಲಕ ಪರಿಶೀಲಿಸಿ, ತನ್ನ ವರದಿಯ ಶಿಫಾರಸ್ಸಿನನ್ವಯ, ಸದರಿ ಕೇಂದ್ರದಲ್ಲಿ ಪ್ರಾರಂಭಿಸಲಾಗಿರುವ ಡಿಪ್ಲೋಮಾ ಕೋರ್ಸುಗಳು Technical or Non-technical ಕೋರ್ಸುಗಳಾಗಿದೆಯೇ ಎಂಬುದರ ಬಗ್ಗೆ ಪುನರ್ ಪರಿಶೀಲನೆ ಅತ್ಯಗತ್ಯವೆಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.<br><br>2. ಒಂದು ವರ್ಷದ ಡಿಪ್ಲೊಮಾ ಕೋರ್ಸುಗಳು ನಾನ್ ಟೆಕ್ನಿಕಲ್ (ತಾಂತ್ರಿಕೇತರ) ಕೋರ್ಸುಗಳಲ್ಲಿ ಬರುವುದರಿಂದ ವಿಶ್ವವಿದ್ಯಾನಿಲಯವು ಸದರಿ ಕೋರ್ಸುಗಳಿಗೆ ಮಾನ್ಯತೆ ನೀಡಲು ಯಾವುದೇ ತೊಂದರೆಯಿಲ್ಲ. ಆದರೆ, ತಾಂತ್ರಿಕ ಕೋರ್ಸುಗಳಿಗೆ ಸಂಬಂಧಪಟ್ಟಂತೆ ಎಐಸಿಟಿಯು ಅನುಮತಿ ನೀಡಿದರೆ ಮಾತ್ರ ಸಂಬಂಧಪಟ್ಟ ಕೋರ್ಸುಗಳಿಗೆ ವಿಶ್ವವಿದ್ಯಾನಿಲಯವು ಮಾನ್ಯತೆ ನೀಡಲು ಅವಕಾಶವಿರುತ್ತದೆ ಎಂದರು.<br><br>3. ಮಾನ್ಯ ಸದಸ್ಯರಾದ ಶ್ರೀ ಎಸ್.ಡಿ.ದೊಡ್ಡಚಾರಿ ರವರು ಮಾತನಾಡಿ, ಸದರಿ ಡಿಪ್ಲೋಮಾ ಕೋರ್ಸುಗಳು ಎರಡು ವರ್ಷದ Para Medical Course ಗಳಾಗಿದ್ದು, ಈ ಬಗ್ಗೆ ಕಾನೂನು ಅಭಿಪ್ರಾಯ ಪಡೆದು ಪರಿಶೀಲನೆ ಮಾಡಿ ನಿರ್ಧಾರ ತೆಗೆದುಕೊಳ್ಳುವುದು ಸೂಕ್ತವೆಂದರು. |
| ತೀರ್ಮಾನ | Axiom Institute of Education, (Youth Efforts For Society Trust (YES)), # 87, 4ನೇ ಕ್ರಾಸ್, ಯಾದವಗಿರಿ, ಮೈಸೂರು ಇವರ ಸಂಸ್ಥೆಯಲ್ಲಿ Specialized |

| | |
|---|---|
| | Programme ಅಡಿಯಲ್ಲಿ 03 ಡಿಪ್ಲೋಮ ಕೋರ್ಸ್‌ಗಳನ್ನು ಪ್ರಾರಂಭಿಸಲು ಮಾನ್ಯತೆ ಕೋರಿದ್ದ ಸಂಬಂಧ ವಿಶ್ವವಿದ್ಯಾನಿಲಯವು ಸದರಿ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲು ಸಿಂಡಿಕೇಟ್ ತೀರ್ಮಾನಿಸಿ, ಸದರಿ ಸಂಸ್ಥೆಯಲ್ಲಿ ತರಗತಿಗಳು ಪ್ರಾರಂಭವಾಗುವ ಮೊದಲು ಮತ್ತೊಮ್ಮೆ ಪರಿವೀಕ್ಷಣಾ ಸಮಿತಿಯು ಖುದ್ದಾಗಿ ಭೇಟಿ ನೀಡಿ ಪರಿಶೀಲನೆ ಮಾಡಲು ಸಿಂಡಿಕೇಟ್ ತೀರ್ಮಾನಿಸಿತು. |
| ಸಾಮಾನ್ಯ ಸಭೆ 2021/7.7 | "ಡಾ. ಯು.ಆರ್. ಅನಂತಮೂರ್ತಿ ಅಧ್ಯಯನ ಪೀಠ"ಕ್ಕೆ ಸಂಬಂಧಿಸಿದಂತೆ, ಸನ್ಮಾನ್ಯ ಕುಲಾಧಿಪತಿಗಳಿಂದ ಅನುಮೋದಿತಗೊಂಡಿರುವ ಪರಿನಿಯಮಾವಳಿಯನ್ನು ಪ್ರಕಟಿಸುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸಾಹಿತಿ ಡಾ. ಯು.ಆರ್.ಅನಂತಮೂರ್ತಿ, ಇವರ ಹೆಸರಿನಲ್ಲಿ ಅಧ್ಯಯನ ಪೀಠವನ್ನು ಸ್ಥಾಪಿಸುವ ಕುರಿತಂತೆ ಸನ್ಮಾನ್ಯ ಕುಲಾಧಿಪತಿಗಳಿಂದ ಅನುಮೋದನೆಗೊಂಡಿರುವ "ಡಾ. ಯು.ಆರ್.ಅನಂತಮೂರ್ತಿ ಅಧ್ಯಯನ ಪೀಠ"ದ ಪರಿನಿಯಮಾವಳಿಯ ಉದ್ದೇಶಗಳನ್ನು ಈಡೇರಿಸಲು ಅಧಿಸೂಚನೆ/ ಪ್ರಕಟಣೆ ಹೊರಡಿಸಲು ಸಿಂಡಿಕೇಟ್ ಸಭೆಯು ನಿರ್ಣಯಿಸಿತು. |
| ಸಾಮಾನ್ಯ ಸಭೆ 2021/7.8 | ವಿದ್ಯಾಶ್ರಮ ಪ್ರಥಮ ದರ್ಜೆ ಕಾಲೇಜಿನ ಅಧ್ಯಕ್ಷರು ನೀಡಿರುವ ದಾಖಲಾತಿಗಳಿಗೆ ಕಾನೂನು ಸಲಹೆಗಾರರು ಪರಿಶೀಲಿಸಿ ನೀಡಿರುವ ವರದಿಯ ಬಗ್ಗೆ. |
| | ವಿದ್ಯಾಶ್ರಮ ಪ್ರಥಮ ದರ್ಜೆ ಕಾಲೇಜಿನ ಕಟ್ಟಡದ ಕರಾರಿಗೆ ಸಂಬಂಧಿಸಿದ ವ್ಯಾಜ್ಯವು ಭಾರತದ ಘನ ಸರ್ವೋಚ್ಚ ನ್ಯಾಯಾಲಯ ಮತ್ತು ಮೈಸೂರಿನ ನ್ಯಾಯಾಲಯದಲ್ಲಿ ತಡೆಹಿಡಿಯಲಾಗಿದೆ (O.S No.369/2020 Stay) ಹಾಗೂ ಪ್ರಸ್ತುತ ಕಾಲೇಜು ನಡೆಯುತ್ತಿರುವ ಕಟ್ಟಡದಲ್ಲಿ 2011ನೇ ಸಾಲಿನಿಂದ ಸ್ವಾಧೀನದಲ್ಲಿರುತ್ತದೆ. ಕಟ್ಟಡದ ಕರಾರಿಗೆ ಸಂಬಂಧಿಸಿದ 30 ವರ್ಷದ ಗುತ್ತಿಗೆ ಅವಧಿ ಏಪ್ರಿಲ್, 2041ರ ವರೆಗೆ ಇರುತ್ತದೆ. ಪ್ರಸ್ತುತ ಗುತ್ತಿಗೆ ಕರಾರಿನ ಅವಧಿ 10 ವರ್ಷ ಪೂರ್ಣಗೊಂಡಿದ್ದು, ಗುತ್ತಿಗೆ ಕರಾರಿನ (Lease) ಅವಧಿ ಇನ್ನೂ 20 ವರ್ಷಗಳವರೆಗೆ ಇರುವುದರಿಂದ ಅಥವಾ ನ್ಯಾಯಾಲಯಗಳ ಅಂತಿಮ ತೀರ್ಪಿನವರೆಗೆ ನಮ್ಮ ಅಸ್ತಿತ್ವದಲ್ಲೇ ಇರುತ್ತದೆ ಎಂದು ತಿಳಿಸಿರುವುದನ್ನು ಸಭೆಯು ಗಮನಿಸಿತು. |
| ತೀರ್ಮಾನ | ಸದರಿ ವಿಷಯವು ಕೋರ್ಟ್‌ನಲ್ಲಿ ಇರುವುದರಿಂದ ತೀರ್ಪು ಬರುವವರೆಗೆ ಕಾಯಬೇಕು ಹಾಗೂ ಕಾನೂನು ಅಭಿಪ್ರಾಯವು ಸ್ಪಷ್ಟವಾಗಿಲ್ಲದ ಕಾರಣ ಮುಂದಿನ ಸಿಂಡಿಕೇಟ್‌ದ ವಿಷಯವನ್ನು ಸಭೆಗೆ ಮುಂದೂಡಲು ತೀರ್ಮಾನಿಸಲಾಯಿತು. |
| ಸಾಮಾನ್ಯ ಸಭೆ 2021/7.9 | ಕಾಮಗಾರಿಗಳನ್ನು ಕೈಗೊಳ್ಳಲು ಮತ್ತು ಅಂದಾಜು ಮೊತ್ತಗಳಿಗೆ ಅನುಮೋದನೆ ನೀಡುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ, ಸಂಶೋಧನಾ ವಿದ್ಯಾರ್ಥಿಗಳಿಗೆ ಸರ್ಕಾರಿ ಕ್ಷೇತ್ರಗಳಿಗೆ ಮತ್ತು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಅನುಕೂಲವಾಗುವಂತೆ Supply and Installation to Establishment Centre for Geospatial Excellence ಸಂಬಂಧ Software and Hardware ಗಳನ್ನು ಖರೀದಿಸಿ ಅಳವಡಿಸುವ ಸಂಬಂಧ ಅಂದಾಜು ವೆಚ್ಚ ರೂ.5,90,00,000=00 (Including Tax) ಗಳಿಗೆ ತಯಾರಿಸಿದ್ದು, ಸದರಿ ಕಾಮಗಾರಿಯನ್ನು ನಿಯಮಾನುಸಾರ ಕರ್ನಾಟಕ ಸರ್ಕಾರದ ಪಾರದರ್ಶಕ ಅಧಿನಿಯಮ 1999 ಮತ್ತು 2000(ಕೆಟಿಟಿಪಿ ಕಾಯ್ದೆ) ಅನುಸರಿಸಿ, ಟೆಂಡರ್ ಪ್ರಕ್ರಿಯೆ ಮೂಲಕ ಕೈಗೊಳ್ಳಲು ನಿರ್ದೇಶಕರು, ಸಾಮರ್ಥ್ಯಾಭಿವೃದ್ಧಿ ಮತ್ತು ಉದ್ಯೋಗಾವಕಾಶಗಳ ಸೇವಾ ಕೇಂದ್ರ, ಮಾನಸಗಂಗೋತ್ರಿ, ಮೈಸೂರು ಇವರಿಗೆ ಅನುಮತಿ ನೀಡಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |

| | |
|---|---|
| ಸಾಮಾನ್ಯ ಸಭೆ 2021/7.10 | ಪರೀಕ್ಷಾ ಅಕ್ರಮ ಹಾಗೂ ಲೋಪದೋಷಗಳ ವಿಚಾರಣಾ ಸಮಿತಿಯ ಶಿಫಾರಸುಗಳು |
| | ಪರೀಕ್ಷಾ ಅಕ್ರಮ ಮತ್ತು ಲೋಪದೋಷಗಳ ವಿಚಾರಣಾ ಸಮಿತಿಯ ಶಿಫಾರಸ್ಸುಗಳು ಪ್ರತಿ ವರ್ಷ ನಡೆಯುವ ಪರೀಕ್ಷಾ ದುಷ್ಕೃತ್ಯವನ್ನು ವರದಿ ಮಾಡುತ್ತಾರೆ. ವಿದ್ಯಾರ್ಥಿಗಳಿಗೆ ಸೂಚನೆ ಕೊಡಲಾಗುತ್ತದೆ. ವಿದ್ಯಾರ್ಥಿಗಳು ಸಮಿತಿಯ ಮುಂದೆ ಬರುತ್ತಾರೆ. ಇದುವರೆವಿಗೂ ಒಟ್ಟು 80 ಪ್ರಕರಣಗಳು ದಾಖಲಾಗಿವೆ. ಇವರುಗಳಿಗೆಲ್ಲಾ ದಂಡ ಹಾಕಲಾಗಿದೆ ಎಂದು ಮಾನ್ಯ ಕುಲಪತಿಗಳು ಸಭೆಗೆ ಮಾಹಿತಿ ನೀಡಿದರು.<br>ಪ್ರೊ. ವೆಂಕಟೇಶ್ ಕುಮಾರ್‌ರವರು ಮಾತನಾಡಿ ಕೆಲವರಿಗೆ ರೂ.500/- ಇನ್ನೂ ಕೆಲವರಿಗೆ ರೂ.1500/-ನಂತೆ ದಂಡ ಶುಲ್ಕದಲ್ಲಿ ವ್ಯತ್ಯಾಸವಿರುವುದು ಹೇಗೆ ಎಂದು ಪ್ರಶ್ನಿಸಿದರು.<br>ಕುಲಸಚಿವ(ಪರೀಕ್ಷಾಂಗ)ರವರು ಮಾತನಾಡಿ ವಿದ್ಯಾರ್ಥಿಗಳು ನಕಲು ಮಾಡುವ ರೀತಿಯ ಮೇಲೆ ದಂಡ ಶುಲ್ಕವನ್ನು ವಿಧಿಸುತ್ತೇವೆ. ಕೆಲವು ವಿದ್ಯಾರ್ಥಿಗಳು ಕೈಯಲ್ಲಿ ಬರೆದುಕೊಂಡಿರುತ್ತಾರೆ. ಇನ್ನು ಕೆಲವು ವಿದ್ಯಾರ್ಥಿಗಳು ಚೀಟಿಗಳನ್ನು ತಂದಿರುತ್ತಾರೆ. ಅದರ ಆಧಾರದ ಮೇಲೆ ದಂಡ ಶುಲ್ಕವನ್ನು ನಿಗಧಿಪಡಿಸುವುದಾಗಿ ಹಾಗೂ ಮುಂದಿನ ಒಂದು ಪರೀಕ್ಷೆಯನ್ನು ಬರೆಯಲು ಅವಕಾಶ ನೀಡುವುದಿಲ್ಲವೆಂದು ಸಭೆಗೆ ತಿಳಿಸಿದರು.<br>ಪ್ರೊ. ವೆಂಕಟೇಶ್ ಕುಮಾರ್‌ರವರು ಮಾತನಾಡಿ ಪರೀಕ್ಷಾ ಅಕ್ರಮದಲ್ಲಿ ಕೆಲವು ಕಾಲೇಜುಗಳ ಹೆಸರುಗಳು ಸತತವಾಗಿ ಪುನರಾವರ್ತನೆಯಾಗುತ್ತಿವೆ ಎಂದು ಆರೋಪಿಸಿದರು.<br>ಮಾನ್ಯ ಕುಲಪತಿಯವರು ಮಾತನಾಡಿ ಯಾವ ಕಾಲೇಜಿನಲ್ಲಿ 5 ಕ್ಕಿಂತ ಹೆಚ್ಚಿನ ಪ್ರಕರಣಗಳು ದಾಖಲಾದರೆ ಅಂತಹ ಕಾಲೇಜುಗಳ ಪರೀಕ್ಷಾ ಕೇಂದ್ರವನ್ನು ರದ್ದುಗೊಳಿಸುವುದಾಗಿ ಸೂಚನೆ ನೀಡಲಾಗುವುದೆಂದು ಸಭೆಗೆ ತಿಳಿಸಿದರು. |
| ತೀರ್ಮಾನ | ಪರೀಕ್ಷಾ ಅಕ್ರಮ ಹಾಗೂ ಲೋಪದೋಷಗಳ ವಿಚಾರಣಾ ಸಮಿತಿಯ ಶಿಫಾರಸುಗಳನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2021/7.11 | Nomination to the position of Life-long Distinguished Professor |
| | ಪ್ರೊ.ಸೂರಪ್ಪ, ಐಐಎಸ್ಸಿ, ನಿವೃತ್ತ ಪ್ರಾಧ್ಯಾಪಕರು ಇವರು ರಾಷ್ಟ್ರೀಯ ಅಕಾಡೆಮಿಯಲ್ಲಿದ್ದು 04 ಎಫ್.ಎನ್.ಇ ಹೊಂದಿದ್ದಾರೆ ಹಾಗೂ ಪ್ರೊ. ನಿರಂಜನ್, ಮಾಜಿ ಕುಲಪತಿಗಳು, ಗುಲ್ಬರ್ಗಾ ವಿಶ್ವವಿದ್ಯಾನಿಲಯ ಇವರು 02 ಎಫ್.ಎನ್.ಇ ಹೊಂದಿರುವ ಹಿನ್ನೆಲೆಯಲ್ಲಿ ಈ ಪ್ರಾಧ್ಯಾಪಕರುಗಳನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೆ Life-long Distinguished Professor (ಜೀವಮಾನ ಪ್ರಾಧ್ಯಾಪಕ) ಸ್ಥಾನಕ್ಕೆ ನಾಮನಿರ್ದೇಶಿಸಿದಲ್ಲಿ ಇವರುಗಳ ಸಂಶೋಧನಾ ಕಾರ್ಯವು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸೇರ್ಪಡೆಗೊಂಡು ನ್ಯಾಕ್ ಸಮಿತಿಯು ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡುವ ಸಂದರ್ಭದಲ್ಲಿ ಅನುಕೂಲವಾಗಲಿದೆಯೆಂದು ಮಾನ್ಯ ಕುಲಪತಿಗಳು ಸಭೆಗೆ ಮಾಹಿತಿ ನೀಡಿದರು. |
| ತೀರ್ಮಾನ | ಪ್ರೊ.ಸೂರಪ್ಪ, ಐಐಎಸ್ಸಿ, ನಿವೃತ್ತ ಪ್ರಾಧ್ಯಾಪಕರು ಹಾಗೂ ಪ್ರೊ. ನಿರಂಜನ್, ಮಾಜಿ ಕುಲಪತಿಗಳು, ಗುಲ್ಬರ್ಗಾ ವಿಶ್ವವಿದ್ಯಾನಿಲಯ ಇವರನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೆ Life-long Distinguished Professor (ಜೀವಮಾನ ಗೌರವಾನ್ವಿತ ಪ್ರಾಧ್ಯಾಪಕ) ಸ್ಥಾನಕ್ಕೆ ನಾಮನಿರ್ದೇಶನ ಮಾಡಲು ಸಿಂಡಿಕೇಟ್ ಸಭೆಯಲ್ಲಿ ತೀರ್ಮಾನಿಸಲಾಯಿತು. |
| ಸಾಮಾನ್ಯ ಸಭೆ 2021/7.12 | ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಿರುವ ಕಾಲೇಜುಗಳಿಂದ ವಸೂಲು ಮಾಡಿರುವ ಶುಲ್ಕದ ಬಗೆಗೆ. |
| | ಶ್ರೀ ಆರ್.ಪ್ರದೀಪ್‌ಕುಮಾರ್ ದೀಕ್ಷಿತ್ ರವರು ಮಾತನಾಡಿ ದೈಹಿಕ ಶಿಕ್ಷಣ ವಿಭಾಗದವರು ರಸೀತಿಗಳನ್ನು ತಾವು ನೀಡಿರುವುದಿಲ್ಲವೆಂದು ತಿಳಿಸಿರುತ್ತಾರೆ. ಕಾರ್ಯಕ್ರಮ ಆಯೋಜಿಸಿರುವುದು ದೈಹಿಕ ಶಿಕ್ಷಣ ವಿಭಾಗಕ್ಕೆ ಸಂಬಂಧಿಸಿದ ವಿಳಾಸ ಹಾಗೂ ಮೈಸೂರು |

| | |
|---|---|
| | ವಿಶ್ವವಿದ್ಯಾನಿಲಯದ ಲೋಗೋ ಇದೆ. ವಿದ್ಯಾರ್ಥಿಗಳು ರಶೀತಿಗಳನ್ನು ಕಾರ್ಯಕ್ರಮ ಆಯೋಜಿಸಿರುವವರೇ ನೀಡಿರುವುದಾಗಿ ತಿಳಿಸಿರುತ್ತಾರೆ. ಆದರೆ ಕಾಲೇಜಿನವರು ನಾವು 20-21ನೇ ಸಾಲಿನಲ್ಲಿ ಯಾವುದೇ ಕ್ರೀಡಾ ಸ್ಪರ್ಧೆಯನ್ನು ಆಯೋಜಿಸಿರುವುದಿಲ್ಲವೆಂದು ಒಂದು ಪತ್ರದಲ್ಲಿ ತಿಳಿಸಿದ್ದಾರೆ. ಮತ್ತೊಂದು ಪತ್ರದಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ ಕಬಡ್ಡಿ ಪಂದ್ಯಾವಳಿಯನ್ನು ಆಯೋಜಿಸಲು ತೀರ್ಮಾನಿಸಿ ವಿಭಾಗದ ಸಾಂಸ್ಕೃತಿಕ ಹಾಗೂ ಕ್ರೀಡಾ ಕಾರ್ಯಕ್ರಮಗಳ ಸಂಯೋಜಕರು ಹಾಗೂ ವಿಭಾಗದ ಅಧ್ಯಕ್ಷರಾಗಿದ್ದ ಡಾ. ಸಿ.ವೆಂಕಟೇಶ್ ಅವರ ಅನುಮತಿ ಪಡೆದು ದಿನಾಂಕ 24 ಮತ್ತು 25 ಫೆಬ್ರವರಿ 2021ರಂದು ಅಂತರ ಕಾಲೇಜು ಕಬಡ್ಡಿ ಪಂದ್ಯಾವಳಿಯನ್ನು ಆಯೋಜಿಸಿದ್ದೆವು. ಈ ಪಂದ್ಯಾವಳಿಗೆ ಮಾನ್ಯ ಕುಲಪತಿಗಳು, ಮಾನ್ಯ ಕುಲಸಚಿವರು ಹಾಗೂ ಮಾನ್ಯ ಶಾಸಕರಾದ ನಾಗೇಂದ್ರ ಅವರನ್ನು ಉದ್ಘಾಟನೆಗೆ ಆಹ್ವಾನಿಸಿದ್ದೆವು. ಆದರೆ ಕುಲಪತಿಗಳು ಬೇರೆ ಸಭೆಗಳಿದ್ದ ಕಾರಣ ಬರಲಿಲ್ಲವೆಂದೂ ಆದರೆ ಮಾನ್ಯ ಕುಲಸಚಿವರಾದ ಪ್ರೊ.ಶಿವಪ್ಪ ಅವರು ಹಾಗೂ ಮಾನ್ಯ ಶಾಸಕರಾದ ನಾಗೇಂದ್ರ ರವರು ಉದ್ಘಾಟನೆ ಮಾಡಿ ಕ್ರೀಡಾಪಟುಗಳಿಗೆ ಶುಭಕೋರಿದರು ಎಂದು ಹೇಳಿ ಪತ್ರ ಬರೆದಿದ್ದಾರೆ. ಎರಡೂ ಉತ್ತರಗಳನ್ನು ಅವರೇ ಕೊಡುತ್ತಿದ್ದಾರೆ ಇದು ಹೇಗೆ ಎಂದು ಪ್ರಶ್ನಿಸಿದರು.<br>ಮಾನ್ಯ ಕುಲಪತಿಗಳು ಮಾತನಾಡಿ ಇದರ ಬಗ್ಗೆ ಡಾ. ಸಿ.ವೆಂಕಟೇಶ್ ಅವರ ಬಳಿ ಮಾತನಾಡಿರುವುದಾಗಿ ಅವರು ತಾವು ನೀಡಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಆದ್ದರಿಂದ ವಿಶ್ವವಿದ್ಯಾನಿಲಯದಲ್ಲಿ ದೈಹಿಕ ಶಿಕ್ಷಣದ ಎರಡು ವಿಭಾಗಗಳಿವೆ. ಈ ರಶೀತಿ ಯಾವ ವಿಭಾಗದಿಂದ, ಯಾರು ನೀಡಿದ್ದಾರೆ ಎಂಬ ಬಗ್ಗೆ ತನಿಖೆ ನಡೆಸಲು ಒಂದು ಸಮಿತಿಯನ್ನು ರಚಿಸುವುದಾಗಿ ಸಭೆಗೆ ತಿಳಿಸಿದರು. |
| ತೀರ್ಮಾನ | ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಿರುವ ಕಾಲೇಜುಗಳಿಂದ ಅನಧಿಕೃತವಾಗಿ ವಸೂಲು ಮಾಡಿರುವ ಹಣದ ಬಗೆಗೆ ತನಿಖೆ ನಡೆಸಲು ಒಂದು ಸಮಿತಿಯನ್ನು ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| **ಸಾಮಾನ್ಯ ಸಭೆ 2021/7.13** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಚಿನ್ನದ ಪದಕ/ನಗದು ಬಹುಮಾನ ದತ್ತಿಗಳನ್ನು ಸ್ಥಾಪನೆ ಮಾಡಲಾಗಿರುವ ದಾನಿಗಳ ಸಂಕ್ಷಿಪ್ತ ಪರಿಚಯಾತ್ಮಕ ಕೈಪಿಡಿ ತಯಾರಿಸುವ ಬಗೆಗೆ. |
| | ಶ್ರೀ ಪ್ರದೀಪ್‌ಕುಮಾರ್ ದೀಕ್ಷಿತ್ ಅವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಚಿನ್ನದ ಪದಕ/ನಗದು ಬಹುಮಾನ ದತ್ತಿಗಳನ್ನು ಸ್ಥಾಪನೆ ಮಾಡಲಾಗಿರುವ ದಾನಿಗಳ ಸಂಕ್ಷಿಪ್ತ ಪರಿಚಯಾತ್ಮಕ ಕೈಪಿಡಿ ಸಿದ್ಧಪಡಿಸಬೇಕೆಂದು ಸಭೆಯಲ್ಲಿ ಪ್ರಸ್ತಾಪಿಸಿದರು.<br>ಈ ಪ್ರಸ್ತಾವನೆಗೆ ಮಾನ್ಯ ಕುಲಪತಿಗಳು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಚಿನ್ನದ ಪದಕ/ನಗದು ಬಹುಮಾನ ದತ್ತಿಗಳನ್ನು ಸ್ಥಾಪನೆ ಮಾಡಲಾಗಿರುವ ದಾನಿಗಳ ಸಂಕ್ಷಿಪ್ತ ಪರಿಚಯಾತ್ಮಕ ಕೈಪಿಡಿ ಸಿದ್ಧಪಡಿಸಬೇಕೆಂದು ಶ್ರೀ ಪ್ರದೀಪ್‌ಕುಮಾರ್ ದೀಕ್ಷಿತ್ ಅವರು ತಿಳಿಸಿರುವುದು ಸೂಕ್ತವಾದುದಾಗಿದೆ ಮತ್ತು ದಾನಿಗಳ ಡೇಟಾ ಸಂಗ್ರಹಣೆ ಮಾಡಲು ಒಂದು ಸಮಿತಿ ರಚಿಸಿ, 102ನೇ ವಾರ್ಷಿಕ ಘಟಿಕೋತ್ಸವದಿಂದ ಈ ಪ್ರಕ್ರಿಯೆಯನ್ನು ಕೈಗೊಳ್ಳಲಾಗುವುದೆಂದು ತಿಳಿಸಿದರು. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಚಿನ್ನದ ಪದಕ/ನಗದು ಬಹುಮಾನ ದತ್ತಿಗಳನ್ನು ಸ್ಥಾಪನೆ ಮಾಡಲಾಗಿರುವ ದಾನಿಗಳ ಸಂಕ್ಷಿಪ್ತ ಪರಿಚಯಾತ್ಮಕ ಕೈಪಿಡಿ ಸಿದ್ಧಪಡಿಸುವ ಸಂಬಂಧ ಒಂದು ಸಮಿತಿ ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| **ಸಾಮಾನ್ಯ ಸಭೆ 2021/7.14** | ದಿವಂಗತ ಶ್ರೀ ಪ್ರಕಾಶ್.ಪಿ. ಹಿರಿಯ ಸಹಾಯಕರು, ಹಣಕಾಸು ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಪತ್ನಿಯಾದ ಶ್ರೀಮತಿ ಸಿ.ಲಕ್ಷ್ಮಿ ಅವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ. |
| **ತೀರ್ಮಾನ** | ವಿಶ್ವವಿದ್ಯಾನಿಲಯದ ಸೇವೆಯಲ್ಲಿರುವಾಗಲೇ ನಿಧನರಾದ ನೌಕರರ ಕುಟುಂಬದವರಿಗೆ ಅನುಕಂಪ ಆಧಾರದ ಮೇಲೆ ಉದ್ಯೋಗ ನೀಡಲು ರಚಿಸಲಾಗಿರುವ ಅಧಿನಿಯಮಗಳ |

| | |
|---|---|
| | ಅನ್ವಯ ದಿವಂಗತ ಶ್ರೀ ಪ್ರಕಾಶ್.ಪಿ., ಹಿರಿಯ ಸಹಾಯಕರು, ಹಣಕಾಸು ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಪತ್ನಿಯಾದ ಶ್ರೀಮತಿ ಸಿ.ಲಕ್ಷ್ಮಿ ಇವರು ಉದ್ಯೋಗ ಕೋರಿ ನಿಗಧಿತ ನಮೂನೆಯಲ್ಲಿ ಸಲ್ಲಿಸಿರುವ ಅರ್ಜಿ ಹಾಗೂ ಅರ್ಜಿಯಲ್ಲಿ ಲಗತ್ತಿಸಿರುವ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿದ ಸಭೆಯು ಶ್ರೀಮತಿ ಸಿ.ಲಕ್ಷ್ಮಿ ಇವರನ್ನು ಅನುಕಂಪದ ಆಧಾರದ ಮೇಲೆ ದ್ವಿತೀಯ ದರ್ಜೆ ಗುಮಾಸ್ತರ ಹುದ್ದೆಯಲ್ಲಿ ನೇಮಕಾತಿ ಮಾಡಲು ಅನುಮೋದಿಸಿತು. |
| ಸಾಮಾನ್ಯ ಸಭೆ 2021/7.15 | 2020-21ನೇ ಶೈಕ್ಷಣಿಕ ಸಾಲಿನಲ್ಲಿ ಎನ್.ಎಸ್.ಎಸ್/ಎನ್.ಸಿ.ಸಿ/ಕ್ರೀಡೆ ಮತ್ತು ಇತರೆ ವಿಶೇಷ ಖೋಟದ ಅಡಿಯಲ್ಲಿ ಸೀಟುಗಳನ್ನು ಹಂಚಲು ಕಾರ್ಯನಿರ್ವಹಿಸಿದ ಸಿಬ್ಬಂದಿ ವರ್ಗದವರಿಗೆ ಗೌರವಧನ ನೀಡಿರುವ ಬಗ್ಗೆ. |
| ತೀರ್ಮಾನ | 2020-21ನೇ ಶೈಕ್ಷಣಿಕ ಸಾಲಿನಲ್ಲಿ ಎನ್.ಎಸ್.ಎಸ್/ಎನ್.ಸಿ.ಸಿ/ಕ್ರೀಡೆ ಮತ್ತು ಇತರೆ ವಿಶೇಷ ಖೋಟದ ಅಡಿಯಲ್ಲಿ ಸೀಟುಗಳನ್ನು ಹಂಚಲು ಹೆಚ್ಚುವರಿಯಾಗಿ ಕಾರ್ಯನಿರ್ವಹಿಸಿದ ಸಿಬ್ಬಂದಿವರ್ಗದವರಿಗೆ ರೂ. 1.25 ಲಕ್ಷಗಳನ್ನು (ಒಂದು ಲಕ್ಷದ ಇಪ್ಪತ್ತೈದು ಸಾವಿರ ರೂಪಾಯಿಗಳು ಮಾತ್ರ) ಗೌರವಧನವನ್ನಾಗಿ ಮಂಜೂರು ಮಾಡಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಭೆಯು ಅನುಸಮರ್ಥಿಸಿತು. |
| ಸಾಮಾನ್ಯ ಸಭೆ 2021/7.16 | ಚಾಮರಾಜನಗರ ಸ್ನಾತಕೋತ್ತರ ಕೇಂದ್ರದಲ್ಲಿ ಸ್ಥಾಪಿಸಿರುವ ಪುತ್ಥಳಿಗಾಗಿ ಅಕ್ರಮವಾಗಿ ಹಣ ಸಂಗ್ರಹ ಮಾಡಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಂಡಿಕೇಟ್ ಸದಸ್ಯರಾದ ಶ್ರೀ ಪ್ರದೀಪ್‌ಕುಮಾರ್ ದೀಕ್ಷಿತ್‌ರವರು ಪ್ರಸ್ತಾಪಿಸಿರುವ ವಿಷಯದ ಬಗ್ಗೆ. |
| | ಶ್ರೀ ಪ್ರದೀಪ್‌ಕುಮಾರ್ ದೀಕ್ಷಿತ್ ಅವರು ಮಾತನಾಡಿ, ಚಾಮರಾಜನಗರ ಸ್ನಾತಕೋತ್ತರ ಕೇಂದ್ರದಲ್ಲಿ ಸ್ಥಾಪಿಸಿರುವ ಪುತ್ಥಳಿಗಾಗಿ ಅಕ್ರಮವಾಗಿ ಹಣ ಸಂಗ್ರಹಿಸಿರುವ ಬಗ್ಗೆ ದೂರೊಂದು ಬಂದಿದ್ದು, ಈ ಸಂಬಂಧ ಸತ್ಯಾಸತ್ಯತೆಯನ್ನು ಪರಿಶೀಲಿಸಬೇಕೆಂದು ಸಭೆಯಲ್ಲಿ ಪ್ರಸ್ತಾಪಿಸಿದರು.<br><br>ಶ್ರೀ ಎಸ್.ಡಿ.ದೊಡ್ಡಚಾರಿ ಮತ್ತು ಡಾ. ಎಂ.ಎಸ್.ದಾಮೋದರ ಅವರುಗಳು ಮಾತನಾಡಿ, ಚಾಮರಾಜನಗರ ಸ್ನಾತಕೋತ್ತರ ಕೇಂದ್ರದಲ್ಲಿ ಪುತ್ಥಳಿಯನ್ನು ಸ್ಥಾಪಿಸುವುದಕ್ಕೆ ಹಣ ಸಂಗ್ರಹಣೆ ಮಾಡಬಹುದು. ಆದರೆ, ಹಣ ಸಂಗ್ರಹಣೆ ಮಾಡುವುದಕ್ಕೆ ಹಾಗೂ ಪುತ್ಥಳಿ ಸ್ಥಾಪಿಸುವುದಕ್ಕೆ ವಿಶ್ವವಿದ್ಯಾನಿಲಯದಿಂದ ಪೂರ್ವಾನುಮತಿ ಪಡೆಯಬೇಕು. ಹಾಗೆಯೇ, ಪುತ್ಥಳಿಯಲ್ಲಿ 'ಕೊಡುಗೆ' ಎಂದು ಹೆಸರು ನಮೂದಿಸಿರುವುದು ಶಿಸ್ತುಬಾಹಿರವಾಗಿರುತ್ತದೆ. ಆದುದರಿಂದ, 'ಕೊಡುಗೆ'ಯಲ್ಲಿ ಹೆಸರನ್ನು ತೆಗೆಯುವುದು ಸೂಕ್ತವೆಂದು ತಿಳಿಸಿದರು. |
| ತೀರ್ಮಾನ | ಚಾಮರಾಜನಗರ ಸ್ನಾತಕೋತ್ತರ ಕೇಂದ್ರದಲ್ಲಿ ಸ್ಥಾಪಿಸಿರುವ ಪುತ್ಥಳಿಗೆ ವಿಶ್ವವಿದ್ಯಾನಿಲಯದ ಪೂರ್ವಾನುಮತಿ ಪಡೆಯದಿರುವುದಕ್ಕೆ ಹಾಗೂ 'ಕೊಡುಗೆ'ಯಲ್ಲಿ ಹೆಸರನ್ನು ನಮೂದಿಸಿರುವುದಕ್ಕೆ ನೋಟೀಸ್ ಜಾರಿಗೊಳಿಸಲಾಗುವುದು ಮತ್ತು ಪುತ್ಥಳಿಗಾಗಿ ಅಕ್ರಮವಾಗಿ ಹಣ ಸಂಗ್ರಹಣೆ ಬಗ್ಗೆ ಒಂದು ತನಿಖಾ ಸಮಿತಿಯನ್ನು ರಚಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿ ಆ ಮೂಲಕ ವರದಿಯನ್ನು ಪಡೆಯುವುದಕ್ಕೆ ಸಭೆಯಲ್ಲಿ ತೀರ್ಮಾನಿಸಲಾಯಿತು. |
| ಸಾಮಾನ್ಯ ಸಭೆ 2021/7.17 | B.Sc. (Sp. & Hg.) ಮತ್ತು M.Sc., (Sp. & Hg.) ಕೋರ್ಸ್‌ಗಳ ಶಿರೋನಾಮೆಯನ್ನು ಮತ್ತು BASLP ಎಂದು MASLP ಬದಲಾವಣೆ ಮಾಡಿರುವ ಬಗ್ಗೆ. |
| ತೀರ್ಮಾನ | B.Sc. (Sp. & Hg.) ಮತ್ತು M.Sc., (Sp. & Hg.) ಕೋರ್ಸ್‌ಗಳ ಶಿರೋನಾಮೆಯನ್ನು ~~ಮತ್ತು~~ ಮತ್ತು BASLP (Bachelor in audiology & Speech Language Pathology) ~~ಎಂದು~~ ಎಂದು MASLP (Master in audiology & Speech Language Pathology) ಬದಲಾವಣೆ ಮಾಡಿರುವುದನ್ನು ಅನುಮೋದಿಸಿದ ಸಿಂಡಿಕೇಟ್ ಮಾನ್ಯ ಕುಲಾಧಿಪತಿಗಳ ಅಂಕಿತಕ್ಕಾಗಿ ಸರ್ಕಾರಕ್ಕೆ ಕಳುಹಿಸಲು ತೀರ್ಮಾನಿಸಲಾಯಿತು. |

| ಸಾಮಾನ್ಯ ಸಭೆ 2021/7.18 | PROMOTIONS TO UNIVERSITY TEACHERS UNDER UGC-CAS. |
|---|---|
| ತೀರ್ಮಾನ: | The Syndicate has noted the procedure adopted in convening the meetings of the Selection committee, through online as well as offline with subject ~~expect~~ experts required for minimum quorum, for promotion to the teachers under UGC-Career Advancement Scheme for the teachers.<br><br>The recommendations of the Selection Committee in various subjects for promotion of teachers in various disciplines to the higher AGP furnished at Annexure – A is approved.<br><br>Further, the Syndicate has also decided to extend the monetary benefits to the teachers from the date of the Eligibility or from the decision of the Syndicate which was held on 25-11-2020 whichever is later in respect to the cadre of Professor(UG). In respect to the cadre of Associate Professor from Assistant Professor and other professors in Postgraduate the monetary benefits to the teachers from the date of the decision of the Syndicate i.e. 29-07-2021. |

<u>ಇತರೆ ವಿಷಯಗಳು</u>

1. ಮಾನ್ಯ ಸದಸ್ಯರಾದ ಶ್ರೀ ಆರ್.ಪ್ರದೀಪ್‌ಕುಮಾರ್ ದೀಕ್ಷಿತ್‌ರವರು ಮಾತನಾಡಿ, ಒಂದೇ ಹುದ್ದೆಯಲ್ಲಿ ಹತ್ತಾರು ವರ್ಷಗಳ ಕಾಲ ಸೇವೆ ಸಲ್ಲಿಸುತ್ತಿರುವವರನ್ನು ಮೂರು ವರ್ಷಕ್ಕೊಮ್ಮೆಯಾದರು ಬದಲಾವಣೆ ಮಾಡಬೇಕೆಂದು ಸಲಹೆಯನ್ನಿತ್ತರು.

   ನಂತರ ಮಾನ್ಯ ಸದಸ್ಯರ ಅಭಿಪ್ರಾಯವನ್ನು ಅನುಮೋದಿಸಿ, ಈ ಬಗ್ಗೆ ಪರಿಶೀಲಿಸಿ, ಕ್ರಮ ಕೈಗೊಳ್ಳುವುದಾಗಿ ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು.

2. ಮಾನ್ಯ ಸದಸ್ಯರಾದ ಶ್ರೀ ಆರ್.ಪ್ರದೀಪ್‌ಕುಮಾರ್ ದೀಕ್ಷಿತ್‌ರವರು ಮಾತನಾಡುತ್ತಾ, ವಸತಿಗೃಹ ಹಂಚಿಕೆಯಲ್ಲಿ ಹೊಸ ಮಾರ್ಗಸೂಚಿಯ ಪ್ರಕಾರ ಹಂಚಿಕೆ ಮಾಡಿರುವ ಕ್ರಮದಲ್ಲಿ ಲೋಪವಾಗಿರುವ ಬಗ್ಗೆ ಸಭೆಯ ಗಮನಕ್ಕೆ ತಂದರು. ಹಾಗೂ ಸಿಂಡಿಕೇಟ್‌ನಲ್ಲಿ ತೆಗೆದುಕೊಂಡಿರುವ ನಿರ್ಣಯಗಳು ಬೇರೆ; ಪತ್ರಿಕೆಯಲ್ಲಿ ಬಂದಿರುವ ಮಾಹಿತಿಗಳೇ ಬೇರೆಯಾಗಿದ್ದು ತೀರ್ಮಾನಗಳು ತದ್ವಿರುದ್ಧವಾಗಿರುವುದರ ಬಗ್ಗೆ ಅಸಮಾಧಾನವನ್ನು ವ್ಯಕ್ತಪಡಿಸಿದರು.

   ನಂತರ, ಮಾನ್ಯ ಕುಲಪತಿಯವರು ಪ್ರತಿಕ್ರಿಯಿಸಿ, ಇನ್ನು ಮುಂದೆ ಸಿಂಡಿಕೇಟ್ ನಿರ್ಣಯಗಳನ್ನು ಪತ್ರಿಕೆಯಲ್ಲಿ ಪ್ರಕಟಿಸದಂತೆ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು.

3. ವಿಶ್ವವಿದ್ಯಾನಿಲಯದ ಆರೋಗ್ಯ ಕೇಂದ್ರಗಳಿಗೆ ಸಂಬಂಧಿಸಿದಂತೆ, ಕೇಂದ್ರಗಳು ಕಾರ್ಯನಿರ್ವಹಿಸುವ ಕೆಲಸದ ಅವಧಿ ಹಾಗೂ ಮತ್ತಿತರ ಎಲ್ಲಾ ಮಾಹಿತಿಗಳನ್ನು

ಒದಗಿಸಬೇಕೆಂದು ಕೋರಲಾಗಿತ್ತು. ಇದುವರೆಗೂ ಮಾಹಿತಿಯು ಸ್ವೀಕೃತವಾಗಿರುವುದಿಲ್ಲ. ಮತ್ತು ಆರೋಗ್ಯ ಕೇಂದ್ರಗಳ ಮೇಲ್ವಿಚಾರಣ ಸಮಿತಿಯೊಂದನ್ನು ರಚಿಸಬೇಕೆಂದು ಸಿಂಡಿಕೇಟ್ ಸದಸ್ಯರಾದ ಶ್ರೀ ಎಂ.ಬಿ.ಗಪ್ಪಣ್ಣನವರು ಸಭೆಯಲ್ಲಿ ಮಾನ್ಯ ಕುಲಪತಿಗಳನ್ನು ಒತ್ತಾಯಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ಆರೋಗ್ಯ ಕೇಂದ್ರಗಳ ಮಾಹಿತಿಯನ್ನು ಕೂಡಲೇ ಒದಗಿಸಲು ಸೂಚಿಸುವುದಾಗಿಯೂ ಆರೋಗ್ಯ ಕೇಂದ್ರಗಳ ಮೇಲ್ವಿಚಾರಣ ಸಮಿತಿಯೊಂದನ್ನು ರಚಿಸಲು ಕ್ರಮಕೈಗೊಳ್ಳಲಾಗುವುದೆಂದು ಸಹ ತಿಳಿಸಿದರು.

4. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಇವರ ಪರವಾಗಿ ಶ್ರೀ ಅಪ್ಪಾಜಿಗೌಡರು, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು ಇವರು ಮಾತನಾಡಿ ಉತ್ತರ ಪತ್ರಿಕೆಗಳ ಸರಬರಾಜಿನ ಲೆಕ್ಕದಲ್ಲಿ ವ್ಯತ್ಯಾಸಗಳು ಕಂಡು ಬಂದಿರುವ ಬಗ್ಗೆ ಸಭೆಯ ಗಮನಕ್ಕೆ ತಂದರು.

5. ಮಾನ್ಯ ಸದಸ್ಯರಾದ ಪ್ರೊ. ಜಿ.ವೆಂಕಟೇಶ್ ಕುಮಾರ್‌ರವರು ಮಾತನಾಡಿ, ಪರೀಕ್ಷಾ ಅಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಶಿಕ್ಷೆ ನೀಡುವುದು ಸರಿಯೇ. ಆದರೇ, ವಿದ್ಯಾರ್ಥಿಗಳಿಗೆ ಸಹಾಯ ಮಾಡುತ್ತಿರುವ ಕಾಲೇಜುಗಳ ಪ್ರಾಂಶುಪಾಲರಿಗೆ ಯಾವ ರೀತಿಯ ಶಿಕ್ಷೆಯನ್ನು ನೀಡಲಾಗುತ್ತಿದೆ ಎಂದು ಸಭೆಯನ್ನು ಪ್ರಶ್ನಿಸಿದರು.

ಇದಕ್ಕೆ ಉತ್ತರವಾಗಿ ಕುಲಸಚಿವ(ಪರೀಕ್ಷಾಂಗ) ಅವರು ಉಳಿಯುವ ಉತ್ತರ ಪತ್ರಿಕೆಗಳನ್ನು ಅದೇ ದಿನದಂದು ವಿಶ್ವವಿದ್ಯಾನಿಲಯಕ್ಕೆ ಹಿಂದಿರುಗಿಸುವಂತೆ ಸೂಚಿಸಲಾಗಿದೆ ಎಂದರು.

ಮಾನ್ಯ ಕುಲಪತಿಯವರು ಮುಂದುವರೆದು ಮಾತನಾಡಿ ಯಾವ ಕಾಲೇಜಿನಲ್ಲಿ ೯ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಪರೀಕ್ಷಾ ಅಕ್ರಮದಲ್ಲಿ ಭಾಗಿಯಾಗಿರುತ್ತಾರೋ ಆ ಕಾಲೇಜಿನ ಪ್ರಾಂಶುಪಾಲರಿಗೆ ನೋಟೀಸ್ ನೀಡಿ, ನಂತರ ಪರೀಕ್ಷಾ ಕೇಂದ್ರವನ್ನೇ ರದ್ದು ಪಡಿಸುವುದಾಗಿ ತಿಳಿಸಿದರು.

ನಂತರ ಸಭೆಯು ಮಾನ್ಯ ಕುಲಪತಿಯವರ ತೀರ್ಮಾನವನ್ನು ಅನುಮೋದಿಸಿತು.

ಅಂತಿಮವಾಗಿ ಅಧ್ಯಕ್ಷರು ಹಾಗೂ ಮಾನ್ಯ ಕುಲಪತಿಗಳು ಸಭೆಯಲ್ಲಿ ಭಾಗವಹಿಸಿದ ಸದಸ್ಯರುಗಳಿಗೆ ವಂದನೆಗಳನ್ನರ್ಪಿಸುವ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕುಲಸಚಿವ ಮತ್ತು ಸದಸ್ಯ ಕಾರ್ಯದರ್ಶಿ

ಕುಲಪತಿ ಮತ್ತು ಅಧ್ಯಕ್ಷರು